**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶ್ರೀರಂಗಪಟ್ಟಣ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ :37/2021**

**ಪ್ರಾ.ಸಾ. :-1**

**ಪ್ರಮಾಣೀಕರಿಸಲಾದ ದಿನಾಂಕಃ- 28.04.2026**

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :**

ನಾನು ವಾಟರ್ ಮ್ಯಾನ್ ಆಗಿ ಸುಮಾರು 13-14 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಮಿಣಜಿಬೋರಯ್ಯನಕೊಪ್ಪಲು ಗ್ರಾಮದಲ್ಲಿ ಟ್ಯಾಂಕರ್ ತುಂಬಿಸಿ ನಲ್ಲಿಗಳ ಮೂಲಕ ನೀರು ಬಿಡುತ್ತೇನೆ. ಸದರಿ ಗ್ರಾಮಕ್ಕೂ, ಕಿರಿಂಗೂರು ಗ್ರಾಮಕ್ಕೂ ಸುಮಾರು 1/2 ಕಿ.ಮೀ.ದೂರ ಇರುತ್ತದೆ. ಬೆಳಿಗ್ಗೆ 6.00 ಗಂಟೆಯಿಂದ ನಾನು ಕೆಲಸ ಪ್ರಾರಂಭಿಸುತ್ತೇನೆ. ಕೆಲಸ ಮುಗಿದ ನಂತರ 10.00 ಗಂಟೆಯ ಮೇಲೆ ಗ್ರಾಮ ಪಂಚಾಯತಿಗೆ ಹೋಗಿ ಹಾಜರಾತಿ ಹಾಕುತ್ತೇನೆಂದರೆ ಸರಿ.

ನಾನು ಮತ್ತು ಕರೀಘಟ್ಟಯ್ಯ ಟೀ ಕುಡಿಯಲು ಹೋಗಿದ್ದ ಬೇಕರಿಯ ಹೆಸರು ಗೊತ್ತಿಲ್ಲ. ಆ ಸಮಯದಲ್ಲಿ ಟೀ ಕುಡಿಯಲು ಸದರಿ ಬೇಕರಿಗೆ 10-15 ಜನ ಬಂದಿದ್ದರು ಎಂದರೆ ಸರಿ. ಕರೀಘಟ್ಟಯ್ಯನವರು ಟೀ ಕುಡಿದು ಹೋದ ನಂತರ ನಾನು ಬೇಕರಿಯ ಬಳಿಯೇ ಉಳಿದುಕೊಂಡಿದ್ದೆ ಎಂದರೆ ಸರಿ. ನಾವು ಬೇಕರಿಯ ಬಳಿ ನಿಂತಿದ್ದಾಗ ಶಬ್ದ ಬಂದ ನಂತರ ಅಪಘಾತ ಸ್ಥಳಕ್ಕೆ ಹೋಗಿರುತ್ತೇವೆ ಎಂದರೆ ಸರಿ. ಆ ಸಮಯದಲ್ಲಿ ಸಾರ್ವಜನಿಕರು ಸಹ ಹೆಚ್ಚಾಗಿ ಸೇರಿಕೊಂಡಿರುತ್ತಾರೆಂದರೆ ಸರಿ. ಸದರಿ ರಸ್ತೆ 25 ಅಡಿ ಅಗಲದ ಟಾರು ರಸ್ತೆಯಾಗಿರುತ್ತದೆ ಹಾಗೂ 2

ಬದಿಗಳಲ್ಲೂ ಸುಮಾರು 6 ಅಡಿ ಪುಟ್‌ಬಾತ್ ಇರುತ್ತದೆ. ಆ ಸಮಯದಲ್ಲಿ ಜನಸಂದಣಿ ಸಹ ಹೆಚ್ಚು ಇರುತ್ತದೆ ಎಂದರೆ ಸರಿ.

ದೂರನ್ನು ಠಾಣೆಗೆ ಹೋಗಿ ನಾನೇ ಬರೆದುಕೊಟ್ಟಿರುತ್ತೇನೆ. ನಾನು ಪದವಿ ಓದಿರುತ್ತೇನೆ. ದೂರಿನಲ್ಲಿ ಕರೀಘಟ್ಟಯ್ಯ ಯಾವ ಕಡೆ ಮುಖ ಮಾಡಿಕೊಂಡು ಹೋಗುತ್ತಿದ್ದರು ಎಂದು ಬರೆದಿಲ್ಲ ಎಂದರೆ ಸರಿ. ಸದರಿ ಅಪಘಾತವು ರಸ್ತೆಯ ಪೂರ್ವದ ಅಂಚಿನಿಂದ 6 ಅಡಿ ಒಳಭಾಗದಲ್ಲಿ ಡಾಂಬರು ರಸ್ತೆಯಲ್ಲಾಗಿರುತ್ತದೆ ಎಂದರೆ ಸರಿ. ನಾವು ಸ್ಥಳಕ್ಕೆ ಹೋಗುವಷ್ಟರಲ್ಲಿ ದ್ವಿಚಕ್ರ ವಾಹನ ಸ್ಥಳದಿಂದ ಹೊರಟು ಹೋಗಿದ್ದ ಕಾರಣ ಸದರಿ ವಾಹನದ ನೋಂದಣಿ ಸಂಖ್ಯೆ ನನಗೆ ಆ ದಿನ ಗೊತ್ತಾಗಿರುವುದಿಲ್ಲ ಎಂದರೆ ಸರಿ. ನಾನು, ಚಾ.ಸಾ-2 ಮತ್ತು 3 ಗಾಯಾಳುವನ್ನು ಶ್ರೀರಂಗಪಟ್ಟಣದ ಆಸ್ಪತ್ರೆಗೆ ಸುಮಾರು 8.00-8.20 ರ ಸಮಯದಲ್ಲಿ ಕರೆದುಕೊಂಡು ಹೋದೆವು. ವೈದ್ಯರಿಗೆ ಅಪಘಾತದ ಬಗ್ಗೆ ಸಂಪೂರ್ಣ ಮಾಹಿತಿ ನೀಡಿಲ್ಲ. ನಂತರ ಕೆ.ಆರ್.ಆಸ್ಪತ್ರೆಗೆ ಸುಮಾರು 12.30 ಕ್ಕೆ ಕರೆದುಕೊಂಡು ಹೋಗಿರುತ್ತೇವೆ. ಆಸ್ಪತ್ರೆಯಲ್ಲಿ ಅಪಘಾತದ ಬಗ್ಗೆ ಹೇಳಿರುತ್ತೇನೆ.

ನಾನು ಕರ್ತವ್ಯಕ್ಕೆ ಹೋದಾಗ ಬೆಳಿಗ್ಗೆ ಮತ್ತು ಸಂಜೆ ಬಯೋಮೆಟ್ರಿಕ್ ಹಾಜರಾತಿ ಹಾಕುತ್ತೇನೆಂದರೆ ಸರಿ. ಆ ದಿನ ನಾನು ಕರ್ತವ್ಯಕ್ಕೆ ಹೋಗಿರುವುದಿಲ್ಲ. ನಾನು, ಕರಿಘಟ್ಟಯ್ಯ ಹಾಗೂ ಚಾ.ಸಾ-2, 3 ಒಂದೇ ಗ್ರಾಮದವರು ಎಂದರೆ ಸರಿ.

ದೂರು ನೀಡಿದ ನಂತರ ಕೃತ್ಯ ಸ್ಥಳಕ್ಕೆ ಒಮ್ಮೆ ಹೋಗಿರುತ್ತೇನೆ, ನಂತರ ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ಸ್ಥಳಕ್ಕೆ ಒಬ್ಬರು ಪೊಲೀಸ್ ಅಧಿಕಾರಿ ಬಂದಿದ್ದರು ಹಾಗೂ ಚಾ.ಸಾ-2, 3 ರವರು ಸಹ ಇದ್ದರು.

ಪೊಲೀಸರು ನೋಟೀಸ್ ಕೊಟ್ಟಿದ್ದರೋ, ಇಲ್ಲವೋ ನೆನಪಿಲ್ಲ. ಈ ದಿನ ನಾನು ನ್ಯಾಯಾಲಯಕ್ಕೆ ಬರಲು ಮೇಲಾಧಿಕಾರಿಗಳ ಅನುಮತಿ ಪಡೆದುಕೊಂಡಿರುತ್ತೇನೆ.

ಮಹಜರನ್ನು ದಿನಾಂಕಃ 12.10.2020 ರಂದು ಬೆಳಿಗ್ಗೆ 11.30 ರವರೆಗೆ ಬರೆದಿರುತ್ತಾರೆ. ಪೊಲೀಸರು ಮಹಜರನ್ನು ಓದಿ ಹೇಳಿರುತ್ತಾರೆ.

ಮೃತರ ಕುಟುಂಬದವರು ವಿಮೆ ಪರಿಹಾರ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ನಾನು ಹೇಳಿದಂತೆ ಆ ದಿನ ನಾನು ಸ್ಥಳದಲ್ಲಿ ಇಲ್ಲದಿದ್ದರೂ ಮೃತರು ನಮ್ಮ ಊರಿನವರಾದ ಕಾರಣ ಅವರ ಕುಟುಂಬಕ್ಕೆ ವಿಮೆ ಪರಿಹಾರ ಕೊಡಿಸುವ ಸಲುವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರನ್ನು ಠಾಣೆಯಲ್ಲಿ ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ಮೃತರು ರಸ್ತೆ ದಾಟುವಾಗ ವಾಹನಗಳನ್ನು ಗಮನಿಸದೇ ಏಕಾಏಕಿ ರಸ್ತೆಗೆ ಹೋದ ಕಾರಣ ಅವರ ತಪ್ಪಿನಿಂದಲೇ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಗಾಯಾಳುವಿನ ಜೊತೆ ನಾನು ಆಸ್ಪತ್ರೆಗೆ ಹೋಗಿಲ್ಲದ ಕಾರಣ ದಾಖಲೆಗಳಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಜನಸಂದಣಿ ಇರುವ ಕಾರಣ ವಾಹನಗಳು ನಿಧಾನವಾಗಿ ಹೋಗುತ್ತವೆ ಎಂದರೆ ಸಾಕ್ಷಿ ಸದರಿ ಬೈಕ್ ವೇಗವಾಗಿ ಬಂದಿರುತ್ತದೆ ಎನ್ನುತ್ತಾರೆ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**